ಶ-72-(35)

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ

**ವಿಷಯ:**

ಬೆಂಗಳೂರು ನಗರದಲ್ಲಿ ಲಾಕ್‌ಡೌನ್ ಅವಧಿಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲು ಅನುಸರಿಸಲಾದ ಮಾನದಂಡಗಳು, ಸಮಿತಿಯ ಶಿಫಾರಸ್ಸುಗಳು, ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರೋನ ವೈರಸ್ ಎಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕೆಬಿಓಸಿಡಬ್ಲ್ಯೂಡಬ್ಲ್ಯೂಬಿ/ಆಹಾರ ವ್ಯವಸ್ಥೆ/ಸಿಆರ್-01/2019-20, ದಿನಾಂಕ: 31-03-2020ರ ಆದೇಶ ಹಾಗೂ ಇತರೆ ಆದೇಶಗಳನ್ವಯ ರಾಜ್ಯದಾದ್ಯಂತ ಲಾಕ್‌ಡೌನ್ ಘೋಷಿಸಿದ್ದರಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕೆಲಸ ನಿರ್ವಹಿಸಲು ಸಾಧ್ಯವಾಗದಿದ್ದರಿಂದ ಹಾಗೂ ಇವರಲ್ಲಿ ಬಹುತೇಕರು ವಲಸೆ ಕಾರ್ಮಿಕರಾಗಿದ್ದು, ಸಾರಿಗೆ ವ್ಯವಸ್ಥೆಯನ್ನು ಭಾರತದಾದ್ಯಂತ ಸ್ಥಗಿತಗೊಳಿಸಿದ್ದರಿಂದ, ಸ್ವಂತ ಸ್ಥಳಕ್ಕೆ ಹೋಗಲು ಸಾಧ್ಯವಾಗದೇ ಇದುದ್ದರಿಂದ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸೋಂಕಿತ ಪ್ರದೇಶಗಳಲ್ಲಿ ವಾಸಿಸುವ ಕಡುಬಡವರಿಗೆ, ನಿರ್ಗತಿಕರಿಗೆ, ಸಾರ್ವಜನಿಕ ಪಡಿತರ ವ್ಯವಸ್ಥೆ ಹೊಂದಿಲ್ಲದ ಇತರೆ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಆಹಾರ ಕಿಟ್‌ಗಳನ್ನು ವಿತರಿಸಲು ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

**ಆಹಾರ ಧಾನ್ಯ ವಿತರಿಸಲು ಮಾನದಂಡಗಳು:**

ಬೆಂಗಳೂರು ನಗರದಲ್ಲಿ ಲಾಕ್‌ಡೌನ್ ಅವಧಿಯಲ್ಲಿ ಆಹಾರ ಧಾನ್ಯಗಳನ್ನು ವಿತರಿಸಲು ಅನುಸರಿಸಲಾದ ಮಾನದಂಡಗಳು / ಆದೇಶಗಳು / ನಡವಳಿಗಳ ವಿವರ ಈ ಕೆಳಕಂಡಂತಿದೆ.

1. ದಿನಾಂಕ: 31-03-2020ರ ಅಪರ ಮುಖ್ಯ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ಪ್ರತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
2. ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿರವರ ಪತ್ರದ ಸಂಖ್ಯೆ: ಕೆಬಿಓಸಿಡಬ್ಲ್ಯೂಡಬ್ಲ್ಯೂಬಿ/ಆಹಾರ ವ್ಯವಸ್ಥೆ/ಸಿಆರ್-01/2019-20, ದಿನಾಂಕ: 31-03-2020ರ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
3. ದಿನಾಂಕ: 01-04-2020ರ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ಪ್ರತಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ: COM/PSR(1)/04/2020-21, ದಿನಾಂಕ: 02-04-2020ರ ಪ್ರತಿಯನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ.

. . .2/-

5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ: COM/PSR/27/2020-21, ದಿನಾಂಕ: 14-04-2020ರ ಪ್ರತಿಯನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ.
6. ದಿನಾಂಕ: 27-04-2020ರ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ಪ್ರತಿಯನ್ನು **ಅನುಬಂಧ-6** ರಲ್ಲಿ ನೀಡಲಾಗಿದೆ.
7. ಮುಖ್ಯ ಅಭಿಯಂತರರು (ಕೆರೆಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಪತ್ರದ ಸಂಖ್ಯೆ: ಮುಅ/ಕೆರೆಗಳು/ಪಿಆರ್/28/2020-21, ದಿನಾಂಕ: 21-05-2020ರ ಪ್ರತಿಯನ್ನು **ಅನುಬಂಧ-7** ರಲ್ಲಿ ನೀಡಲಾಗಿದೆ.

**ಸಮಿತಿಯ ಶಿಫಾರಸ್ಸುಗಳು:** ಆಹಾರ ಧಾನ್ಯ ಕಿಟ್ ವಿತರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯ ಶಿಫಾರಸ್ಸುಗಳು ಯಾವುದೂ ಇರುವುದಿಲ್ಲ.

**ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳ ವಿವರ:**

ದಿನಾಂಕ: 10-11-2006ರ ಸುತ್ತೋಲೆಯಲ್ಲಿ ಪ್ರಕೃತಿ ವಿಕೋಪ ಸಂದರ್ಭಗಳು ಮತ್ತು ಸರ್ಕಾರವು ಘೋಷಿಸಿದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ-1999ರ ಕಲಂ-4(ಎ)ರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ-1999ರ ಕಾಯ್ದೆಯಿಂದ ವಿನಾಯಿತಿ ಪಡೆದು, ಈ ಕೆಳಕಂಡ ಸಂಸ್ಥೆಯ ವತಿಯಿಂದ ಆಹಾರ ಸಾಮಗ್ರಿಗಳ ಕಿಟ್‌ಗಳನ್ನು ಮಾರುಕಟ್ಟೆ ದರಗಳಂತೆ ಹಾಗೂ ಅಕ್ಕಿಯನ್ನು ನೇರವಾಗಿ ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ ರವರಿಂದ ಪಡೆಯಲಾಗಿರುತ್ತದೆ.

1. ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿರವರ ಪತ್ರದ ಸಂಖ್ಯೆ: ಕೆಬಿಒಸಿಡಬ್ಲ್ಯೂಡಬ್ಲ್ಯೂಬಿ/ಆಹಾರ ವ್ಯವಸ್ಥೆ/ಸಿಆರ್/01/2019-20 ದಿನಾಂಕ: 31-03-2020ರ ಅಪರ ಮುಖ್ಯ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ ಅಕ್ಷಯ ಪಾತ್ರ ಪ್ರತಿಷ್ಠಾನ ರವರಿಂದ 80,000 ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ. ಸದರಿ ನಡವಳಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 95 ಎಂಎನ್‌ವೈ 2020 (ಭಾಗ-1), ದಿನಾಂಕ: 16-05-2020 ರಂತೆ ಅಕ್ಷಯ ಪಾತ್ರ ಪ್ರತಿಷ್ಠಾನ ರವರಿಂದ 50,000 ಕಿಟ್‌ಗಳನ್ನು ಸರಬರಾಜು ಮಾಡಲಾಗಿದೆ. ಸದರಿ ಆದೇಶವನ್ನು **ಅನುಬಂಧ-8** ರಲ್ಲಿ ನೀಡಲಾಗಿದೆ.
3. ಸರ್ಕಾರದ ಆದೇಶ ಸಂಖ್ಯೆ: ನಅಇ 108 ಎಂಎನ್‌ಜಿ 2020, ದಿನಾಂಕ: 20-05-2020ರಂತೆ ಮೆ॥ ಶಿವಶಕ್ತಿ ಟ್ರೇಡರ್ಸ್: 40,000 ಕಿಟ್‌ಗಳು, ಮೆ॥ ಮೆಟ್ರೋ ಕ್ಯಾಷ್ ಅಂಡ್ ಕ್ಯಾರಿ: 40,000 ಕಿಟ್‌ಗಳು ಮತ್ತು ಅಕ್ಷಯ ಪಾತ್ರ ಪ್ರತಿಷ್ಠಾನ ರವರಿಂದ 39,692 ಕಿಟ್‌ಗಳನ್ನು (ಹೀಗೆ ಒಟ್ಟು: 1,19,692 ಕಿಟ್‌ಗಳು) ಸರಬರಾಜು ಮಾಡಲಾಗಿರುತ್ತದೆ. ಸದರಿ ಆದೇಶವನ್ನು **ಅನುಬಂಧ-9** ರಲ್ಲಿ ನೀಡಲಾಗಿದೆ.

4. ಸರ್ಕಾರದ ಆದೇಶ ಸಂಖ್ಯೆ: ನಅಇ 115 ಎಂಎನ್‌ಜಿ 2020, ದಿನಾಂಕ: 07–07–2020ರಂತೆ ಮೆ॥ ಶಿವಶಕ್ತಿ ಟ್ರೇಡರ್ಸ್: 70,000 ಕಿಟ್‌ಗಳನ್ನು ಮತ್ತು ಮೆ॥ ಮೆಟ್ರೋ ಕ್ಯಾಷ್ ಅಂಡ್ ಕ್ಯಾರಿ: 30,000 ಕಿಟ್‌ಗಳನ್ನು (ಹೀಗೆ ಒಟ್ಟು: 1,00,000 ಕಿಟ್‌ಗಳು) ಸರಬರಾಜು ಮಾಡಲಾಗಿರುತ್ತದೆ. ಸದರಿ ಆದೇಶವನ್ನು **ಅನುಬಂಧ–10** ರಲ್ಲಿ ನೀಡಲಾಗಿದೆ.

**ಸಂಖ್ಯೆ: ನಅಇ 202 ಎಂಎನ್‌ವೈ 2020**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ.)

ಮುಖ್ಯಮಂತ್ರಿ